ದಿನಾಂಕಃ 18.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಸಿ.ವಿ.ಎಸ್. ಅವರಿಂದ–**

1. ನಾನು 8 ನೇ ತರಗತಿ ಓದಿದ್ದೇನೆ. ನನಗೆ ಇಂಗ್ಲೀಷ್ ಓದಲು–ಬರೆಯಲು ಬರುವುದಿಲ್ಲ. ಕನ್ನಡ ಬರುತ್ತದೆ. ಪ್ರಸ್ತುತ ದಾವೆಯಲ್ಲಿ ತಾನು ಸಲ್ಲಿಸಿರುವ ಮೌಲ್ಯಮಾಪನ ಪಟ್ಟಿಯನ್ನು ಯಾವ ಆಧಾರದ ಮೇಲೆ ಮಾಡಿಸಿರುತ್ತೀರಾ ಎಂಬ ಪ್ರಶ್ನೆಗೆ ನನಗೆ ಗೊತ್ತಾಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

2. ವಾದಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಅದನ್ನು ನನ್ನ ಅಣ್ಣ ಮಾಡಿಕೊಟ್ಟಿರುತ್ತಾರೆ ನನಗೆ ಏನೂ ಗೊತ್ತಿಲ್ಲ. ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ.

3. ಸಾಮಾನ್ಯವಾಗಿ ಯಾರಿಗಾದರೂ ಏನಾದರೂ ಹೇಳಬೇಕು ಎಂದು ಬರೆದರೆ ಎಲ್ಲರಿಗೂ ಅರ್ಥವಾಗುವ ಭಾಷೆಯಲ್ಲಿ ಹೇಳಬೇಕು ಎಂದರೆ ಸರಿ. 1 ನೇ ಪ್ರತಿವಾಗಿ ಏನು ತಕರಾರು ಸಲ್ಲಿಸಿರುತ್ತಾರೆ ನಾನು ತಿಳಿದುಕೊಂಡಿಲ್ಲ. ತಿಳಿದುಕೊಳ್ಳಲು ತೊಂದರೆ ಇತ್ತೊ ಇಲ್ಲವೊ ನನಗೆ ಗೊತ್ತಿಲ್ಲ.

4. ನನ್ನ ಮದುವೆ ಆಗಿ 26 ವರ್ಷಗಳಾಗಿರುತ್ತವೆ. 3 ನೇ ವಾದಿ ನನ್ನ ಅಕ್ಕ ರಮಾದೇವಿ ಅವರ ಮದುವೆ ನನ್ನ ಮದುವೆ ಆಗುವ 7–8 ವರ್ಷಗಳ ಮೊದಲು ಆಗಿರುತ್ತದೆ. 2 ನೇ ವಾದಿ ನನ್ನ ಅಕ್ಕ ಅವರ ಮದುವೆ ಆಗಿ ನನ್ನ ಮದುವೆ ಆಗುವ 10–12 ವರ್ಷಗಳ ಮೊದಲು ಆಗಿರುತ್ತದೆ. ನಾವುಗಳು ಮದುವೆ ಆದಾಗಿನಿಂದ ಗಂಡನ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ನಾನು ಹಾಗೂ ನನ್ನ ಅಕ್ಕಂದಿರು ಮದುವೆ ಮೊದಲು ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ.

5. ಪಾಪೇಗೌಡ ನನ್ನ ತಂದೆ ಹೆಸರು. ನನ್ನ ತಾತನ ಹೆಸರು ಹೆಚ್ ಪಿ. ಪುಟ್ಟೇಗೌಡ. ನನ್ನ ತಾತನ ಅಪ್ಪನ ಹೆಸರು ನನಗೆ ಗೊತ್ತಿಲ್ಲ. ನನ್ನ ತಾತನಿಗೆ ಒಟ್ಟು 5 ಜನ ಅಣ್ಣ ತಮ್ಮಂದಿರು. ಸಾಕ್ಷಿ ಮುಂದುವರಿದು ನನ್ನ ತಾತನಿಗೆ ಎಷ್ಟು ಜನ ಅಣ್ಣ ತಮ್ಮಂದಿರು ನನಗೆ ಗೊತ್ತಿಲ್ಲ , ನನ್ನ ತಂದೆಗೆ 5 ಜನ ಅಣ್ಣ ತಮ್ಮಂದಿರು. ಯಾವ ಆಧಾರದ ಮೇಲೆ ವಂಶಾವಳಿ ಹಾಜರುಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

6. ನನ್ನ ತಾಯಿ ತೀರಿಹೋಗಿ 8 ವರ್ಷವಾಗಿರುತ್ತದೆ. ತಂದೆ 16 ವರ್ಷಕಿಕ್ಕಂತ ಹೆಚ್ಚಿನ ಸಮಯ ಆಗಿರಬಹುದು. ಪ್ರತಿವಾದಿ ಮಾರುತಿಗೌಡ ನನ್ನ ಅಣ್ಣ ಎಂದರೆ ಸರಿ. 1 ನೇ ವಾದಿ ಮೊಗಣ್ಣೇಗೌಡ ನನ್ನ ಅಣ್ಣ. 1 ನೇ ವಾದಿ ಮೊಗಣ್ಣೇಗೌಡ ಹಳೇಬೀಡಿನಲ್ಲಿ ಹಾಲಿನ ಡೈರಿ ಸೆಕ್ರೆಟರಿ ಆಗಿದ್ದರು ಎಂದರೆ ಸರಿ.

7. ನನ್ನ ತಂದೆ ತೀರಿಹೋದ ನಂತರ ಮನೆಯ ಜವಾಬ್ದಾರಿ ನಿಭಾಯಿಸುವುದು ಪ್ರತಿವಾದಿ ಮಾರುತಿಗೌಡ ನನ್ನ ಅಣ್ಣನ ಜವಾಬ್ದಾರಿಯಾಗಿತ್ತು ಎಂದರೆ ಸರಿ. 1 ನೇ ವಾದಿ ಮೊಗಣ್ಣೇಗೌಡ ಅವರು ಹಾಲಿನ ಡೈರಿ ಸೆಕ್ರೆಟರಿ ಆಗಿದ್ದಾಗ, ಹಣಕಾಸಿನ ವ್ಯವಹಾರವನ್ನು ಅಸ್ತವ್ಯಸ್ಥ ಮಾಡಿ, ಅವ್ಯವಹಾರ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ಮಾಡಿದ ಅವ್ಯವಹಾರಗಳನ್ನು ಪ್ರತಿವಾದಿ ಮಾರುತಿಗೌಡ ಚುಪ್ತ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

8. 2 ನೇ ವಾದಿ ಹೇಮಾವತಿ ಅವರಿಗೆ ಇಬ್ಬರು ಮಕ್ಕಳು. 1. ಸರಿತಾ 2. ಮಹದೇವ ಅವರ ಹೆಸರು. ಹೇಮಾವತಿ ಅವರ ಮಕ್ಕಳ ಮದುವೆಗೆ ಪ್ರತಿವಾದಿ ಏನೂ ಸಹಾಯ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಪ್ರತಿವಾದಿಯೆ 2 ನೇ ವಾದಿಯವರು ಮಕ್ಕಳ ಮದುವೆಗೆ ಸಂಪೂರ್ಣ ಬೆಂಬಲ ನೀಡಿ, ಸಹಾಯ

ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ವಾದಿ ಮೊಗಣ್ಣೇಗೌಡ ಅವರ ಮದುವೆ ಸಹ ಪ್ರತಿವಾದಿ ಮಾರುತಿಗೌಡರೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಮಾರುತಿಗೌಡರು ತನ್ನ ಸ್ವಂತ ಖರ್ಚಿನಿಂದ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ನನ್ನ ತಂದೆ ತಾಯಿ ಜೀವಂತವಾಗಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. 1 ನೇ ವಾದಿ ಮದುವೆ ಆಗಿ 20 ವರ್ಷಗಳಾಗಿಬಹುದು.

**9.** ಪ್ರತಿವಾದಿ ಮಾರುತಿಗೌಡರು ಮನೆ ಜವಾಬ್ದಾರಿ ವಹಿಸಿಕೊಂಡು ಎಲ್ಲಾ ಹೆಣ್ಣು ಮಕ್ಕಳ ಮದುವೆಯನ್ನು ತನ್ನ ಸ್ವಂತ ಸಂಪಾದನೆಯಿಂದ ಮದುವೆ ಮಾಡಿರುತ್ತಾರೆ ಎಂದರೆ ಸುಳ್ಳು. 3 ನೇ ವಾದಿ ರಮಾದೇವಿ ಅವರಿಗೆ ಇಬ್ಬರು ಮಕ್ಕಳು 1. ರವೀಶ್ 2. ರೂಪ. ರವೀಶ್ ಹಾಗೂ ರೂಪ ಅವರ ವಿದ್ಯಾಭ್ಯಾಸಕ್ಕೆ ಪ್ರತಿವಾದಿ ಸಹಾಯ ಮಾಡಿರುತ್ತಾರೆ ಎಂದರೆ ಸುಳ್ಳು. ಸದರಿ 3 ನೇ ವಾದಿಯ ಮಕ್ಕಳು ಕಲ್ಲಹಳ್ಳಿಯಲ್ಲಿ ವಾಸವಾಗಿದ್ದಾರೆ. 3 ನೇ ವಾದಿಯ ಮಕ್ಕಳಿಗೆ ಪ್ರತಿವಾದಿ ಏನೂ ಖರ್ಚು ಮಾಡಿ ಓದಿಸಿರುತ್ತಾರೆ ಹಾಗೂ ಮದುವೆ ಮಾಡಿರುತ್ತಾರೆ ನನಗೆ ಗೊತ್ತಿಲ್ಲ.

10. ನನ್ನ ತಾತ ಪುಟ್ಟೇಗೌಡರಿಗೆ ದಾಸೇಗೌಡ ಎಂಬ ಸಹೋದರ ಇದ್ದರು ಎಂದರೆ ಸರಿ. ದಾಸೇಗೌಡ ಅವರ ಹೆಂಡತಿ ಹೆಸರು ಅಕ್ಕಯ್ಯಮ್ಮ ಎಂದರೆ ಸರಿ. ದಾವಾ ಆಸ್ತಿಗಳು ಮೂಲತಃ ದಾಸೇಗೌಡ ಹಾಗೂ ಪುಟ್ಟೇಗೌಡರಿಗೆ ಸಂಬಂಧಪಟ್ಟವು ಎಂದರೆ ನನಗೆ ಗೊತ್ತಿಲ್ಲ.

11. ದಾಸೇಗೌಡ ಹಾಗೂ ಅವರ ವಾರಸುದಾರರ ಬಗ್ಗೆ ವಿಚಾರ ತಿಳಿದುಕೊಂಡಿದ್ದೇನೆ. ಅವರಿಗೆ ವಾರಸುದಾರರು ಯಾರು ಇಲ್ಲ. ಈ ಬಗ್ಗೆ ನನ್ನ ಬಳಿ ದಾಖಲಾತಿಗಳು ಇಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ದಾವಾ ಆಸ್ತಿಗಳ ಸರ್ವೇ ನಂಬರ್ ಗೊತ್ತು. ಚೆಕ್ಕುಬಂದಿ ನನಗೆ ಗೊತ್ತಿಲ್ಲ. ವಾದಪತ್ರದಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಚೆಕ್ಕುಬಂದಿ ಏನೂ ಬರೆದಿರುತ್ತಾರೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳು ಎಷ್ಟಿವೆ ನನಗೆ ಗೊತ್ತಿಲ್ಲ ಎಂದರೆ ಸರಿ.

13. ಪ್ರತಿವಾದಿ ತಮ್ಮ ಪ್ರತಿವಾದ ಪತ್ರದ ಪ್ಯಾರಾ-11ರಲ್ಲಿ ತಿಳಿಸಿರುವ ಹಾಗೆ ನಾವು, ದಾಸೇಗೌಡ ಅವರ ವಾರಸುದಾರರನ್ನು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರಾಗಿದ್ದು ಅವರನ್ನು ಈ ದಾವೆಯಲ್ಲಿ ಸೇರಿಸಲು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿ.

**ಮುಂದುವರಿದ ಪಾಟೀಸವಾಲುಃ ಪ್ರತಿವಾದಿಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.